**ದಿನಾಂಕಃ17.06.2019 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ–ಸವಾಲುಃ ಪ್ರತಿವಾದಿ ಪರ ಶ್ರೀ ಜಿ.ಕೆ.ಎಂ ವಕೀಲರಿಂದಃ–**

ನಾನು 4 ನೇ ತರಗತಿವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನಾವು ಇಬ್ಬರು ಅಣ್ಣ–ತಮ್ಮಂದಿರು. ನನ್ನ ಅಣ್ಣನ ಹೆಸರು ನಾಗರಾಜಪ್ಪ. ಈ ಪ್ರಕರಣವನ್ನು ಪ್ರತಿವಾದಿ 1 ರಿಂದ 4 ರವರ ವಿರುದ್ಧ ಕ್ರಯ ಕರಾರು ಪತ್ರದ ಪ್ರಕಾರ ಜಮೀನನ್ನು ನನಗೆ ಕ್ರಯ ಪತ್ರ ಮಾಡಿಸಿಕೊಡಿ ಎಂದು ಕೇಸು ಹಾಕಿದ್ದೇನೆ ಪ್ರತಿವಾದಿಯ ತಂದೆಯ ಹೆಸರು ಬೊಮ್ಮೇಗೌಡ. ತಾಯಿಯ ಹೆಸರು ನೀಲಮ್ಮ ಎಂದರೆ ಸಾಕ್ಷಿ ಇರಬಹುದು, ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಹುಟ್ಟೂರು ಹರಿಯಬ್ಬೆ ಗ್ರಾಮ. ನಾನು ಹುಟ್ಟಿದಾಗಿನಿಂದಲೂ ಹರಿಯಬ್ಬೆ ಗ್ರಾಮದಲ್ಲಿ ವಾಸವಾಗಿದ್ದೇನೆ. ಪ್ರತಿವಾದಿಗಳ ತಂದೆ ಬೊಮ್ಮೇಗೌಡ ಹರಿಯಬ್ಬೆ ಗ್ರಾಮದವರು. ಪ್ರತಿವಾದಿ 1 ರಿಂದ 4 ರವರು ಹರಿಯಬ್ಬೆ ಗ್ರಾಮದಲ್ಲಿ ಹುಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲ.

ನಾನು ಹುಟ್ಟಿದಾಗಿನಿಂದಲೂ ಪ್ರತಿವಾದಿ 1 ರಿಂದ 4 ರವರನ್ನು ನೋಡಿದ್ದೇನೆ. ಬೊಮ್ಮೇಗೌಡನಿಗೆ 4 ಜನ ಗಂಡು ಮಕ್ಕಳು ಅಂದರೆ ಪ್ರತಿವಾದಿ 1 ರಿಂದ 4 ಮತ್ತು ಮೂರು ಜನ ಹೆಣ್ಣುಮಕ್ಕಳು, ಅವರ ಹೆಸರು ಸುಶೀಲಮ್ಮ, ಲಲಿತಮ್ಮ ಮತ್ತು ಲಕ್ಷ್ಮಿ ಎಂದರೆ ಇರಬಹುದು. ಸುಶೀಲಮ್ಮನವರ ಗಂಡನ ಹೆಸರು ರಾಮಕೃಷ್ಣಪ್ಪ, ಅವರು ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಸುಶೀಲಮ್ಮ ಮದುವೆಯಾಗುವುದಕ್ಕಿಂತ ಮುಂಚೆ ಹರಿಯಬ್ಬೆ ಗ್ರಾಮದಲ್ಲಿ ನೋಡಿದ್ದೀರಾ ಎಂದರೆ ಸಾಕ್ಷಿ ನಾನು ನೋಡಿಲ್ಲ ಎಂದು ಹೇಳುತ್ತಾರೆ. ಲಲಿತಮ್ಮ ಇವರ ಗಂಡನ ಹೆಸರು ಭೋಜರಾಜ. ಅವರನ್ನು ಹರಿಯಬ್ಬೆ ಗ್ರಾಮದಲ್ಲಿ ನೋಡಿದ್ದೀರಾ ಎಂದರೆ ನೋಡಿದ್ದೇನೆ, ಆದರೆ ಪರಿಚಯ ಇಲ್ಲ ಎಂದು ಹೇಳುತ್ತಾರೆ. ಲಲಿತಮ್ಮನವರ ಗಂಡ ಭೋಜರಾಜ ತೀರಿಕೊಂಡಿದ್ದಾರೆ, ಆದ್ದರಿಂದ ಲಲಿತಮ್ಮ ಹರಿಯಬ್ಬೆ ಗ್ರಾಮದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಅವರ ಗಂಡನ ಬಗ್ಗೆ ನನಗೆ ಗೊತ್ತಿಲ್ಲ, ಒಟ್ಟಿನಲ್ಲಿ ಹರಿಯಬ್ಬೆ ಗ್ರಾಮದಲ್ಲಿದ್ದಾರೆ ಎಂದು ಹೇಳುತ್ತಾರೆ. ಸದರಿ ಲಲಿತಮ್ಮ ತನ್ನ ತಂದೆ

ಮನೆಯಾದ ಹರಿಯಬ್ಬೆಯಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಲಕ್ಷ್ಮಕನವರ ಗಂಡನ ಹೆಸರು ನಾಗೇಶ್ ಎಂದರೆ ನನಗೆ ಗೊತ್ತಿಲ್ಲ. ಅವರನ್ನು ಮದುವೆಯಾಗುವುದಕ್ಕಿಂತ ಮುಂಚೆ ನಮ್ಮ ಊರಿನಲ್ಲಿ ನೋಡಿರುವುದಿಲ್ಲ. ಅವರಿಬ್ಬರೂ ಈಗ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಮತ್ತು ಪ್ರತಿವಾದಿ ಒಂದೇ ಜನಾಂಗದವರು ಎಂದರೆ ಸರಿ. ಪ್ರತಿವಾದಿಗಳು ನನಗೆ ನೆಂಟರಾಗಬೇಕು. ನಿಮ್ಮ ಮತ್ತು ಪ್ರತಿವಾದಿಯರ ಜಮೀನು ಅಕ್ಕ-ಪಕ್ಕ ಇವೆ ಎಂದರೆ ಸರಿ.

ಪ್ರತಿವಾದಿಯರ ತಂದೆಗೆ ಸರ್ವೆ ನಂಬರ್ಃ 50, 46, 57/3, 86/3 ಮತ್ತು 134/2 ಇವುಗಳಲ್ಲಿ ಒಟ್ಟಾರೆಯಾಗಿ 27 ಎಕರೆ ಜಮೀನು ಇದೆ ಎಂದರೆ ನನಗೆ ಗೊತ್ತಿಲ್ಲ. ಈ ಒಟ್ಟು ಜಮೀನು ಪ್ರತಿವಾದಿಗಳ ಒಟ್ಟು ಕುಟುಂಬದ ಆಸ್ತಿ ಎಂದರೆ ಸರಿ. 1 ನೇ ಪ್ರತಿವಾದಿ ಬೆಂಗಳೂರಿನಲ್ಲಿ ಕಾಂಟ್ರ್ಯಾಕ್ಟ್ ಕೆಲಸ ಮಾಡುತ್ತಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. 1 ನೇ ಪ್ರತಿವಾದಿ ತನ್ನ ಕುಟುಂಬದ ಸಹಿತ ಸುಮಾರು ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ಊರಿಗೆ ಬಂದುಹೋಗಿ ಮಾಡುತ್ತಾರೆ ಎಂದು ಹೇಳುತ್ತಾರೆ. ಅದೇ ರೀತಿ 2 ನೇ ಪ್ರತಿವಾದಿ ತನ್ನ ಕುಟುಂಬ ಸಹಿತ ಸುಮಾರು ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ಊರಿಗೆ ಬಂದುಹೋಗಿ ಮಾಡುತ್ತಾರೆ ಎಂದು ಹೇಳುತ್ತಾರೆ. 3 ನೇ ಪ್ರತಿವಾದಿಯೂ ಸಹ ಅವರ ಕುಟುಂಬ ಸಹಿತ ಬೆಂಗಳೂರಿನಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅವರು ಊರಿಗೆ ಬಂದುಹೋಗಿ ಮಾಡುತ್ತಾರೆ ಎಂದು ಹೇಳುತ್ತಾರೆ. 4 ನೇ ಪ್ರತಿವಾದಿ ಮಾತ್ರ ಹರಿಯಬ್ಬೆ ಗ್ರಾಮದಲ್ಲಿ ತನ್ನ ಕುಟುಂಬದ ಜೊತೆಯಲ್ಲಿ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡಿದ್ದಾರೆ ಎಂದರೆ ಸರಿ. 1 ರಿಂದ 3 ನೇ ಪ್ರತಿವಾದಿಗಳು 4 ನೇ ಪ್ರತಿವಾದಿಗೆ ವ್ಯವಸಾಯಕ್ಕೆ ಸಹಾಯ ಮಾಡುತ್ತಾರೆ ಎಂದರೆ ಸರಿ. ಬಂದಂತಹ ಬೆಳೆಯಲ್ಲಿ 4 ಜನ ಹಂಚಿಕೊಳ್ಳುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**ಮುಂದುವರಿದ ಪಾಟೀ-ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ,. ಹಿರಿಯೂರು.